**ಅ. ದಾ. ಸಂ. : 310/2015**
**ಪಿ.ಡಬ್ಲ್ಯೂ : 01**

**ದಿನಾಂಕ : 07/02/2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- ಪ್ರತಿವಾದಿಯ** ಪರ ವಕೀಲರಿಂದ :-

ದಾವಾ ಸ್ವತ್ತು ಮೂಲತಃ ಹನುಮಂತಪ್ಪ ಅಳಗವಾಡಿರವರಿಂದ ಬಂದಿದೆ ಎಂದರೆ ಸರಿ. ಆತನಿಗೆ ಯಲ್ಲಪ್ಪ, ನಾಗಪ್ಪ, ಬಸಪ್ಪ, ಎಂಬ ಮೂರು ಮಕ್ಕಳು ಎಂದರೆ ಸರಿ. ಈಗ ಸದರಿ ಮೂರುಜನ ಮರಣ ಹೊಂದಿರುತ್ತಾರೆ ಎಂದರೆ ಸರಿ. ಅವರ ಹೆಂಡತಿಯರು ಸಹ ಮರಣ ಹೊಂದಿರುತ್ತಾರೆ ಎಂದರೆ ಸರಿ. ಯಲ್ಲಪ್ಪನ ಮಗ ಭೀಮಪ್ಪ ಕೂಡ ಮರಣ ಹೊಂದಿರುತ್ತಾನೆ ಎಂದರೆ ಸರಿ. ಪ್ರತಿವಾದಿ 2 ರಿಂದ 8 ಭೀಮಪ್ಪನ ವಾರಸುದಾರರು ಎಂದರೆ ಸರಿ. ನಾಗಪ್ಪನ ವಾರಸುದಾರರು ಪ್ರತಿವಾದಿ 9 ರಿಂದ 13 ಎಂದರೆ ಸರಿ. ತಿಪ್ಪಣ್ಣನಿಗೆ ವಾದಿ 1 ರಿಂದ 4 ವಾರಸುದಾರರು ಎಂದರೆ ಸರಿ. ದಾವಾ ಸ್ವತ್ತಿಗೆ ಈಗ ಎರಡು ಆರ್.ಟಿ.ಸಿ.ಗಳು ಬರುತ್ತಿದ್ದು ವಿಸ್ತೀರ್ಣ ವಿಭಜನೆ ಆಗಿದೆ ಎಂದರೆ ಸರಿ. ಸರ್ವೆ ನಂ. 237/2 ರಲ್ಲಿ ಮೂರು ಗುಂಟೆ ವಿಸ್ತೀರ್ಣ ಐದನೇ ಪ್ರತಿವಾದಿ ಹೆಸರಿಗೆ ಕ್ರಯ ಎಂದು ಉತಾರದಲ್ಲಿ ನಮೂದು ಇದೆ ಎಂದರೆ ಸರಿ. ಕ್ರಯ ಎಂದು ನಮೂದಾಗಿರುವ ವಿಷಯ ನನ್ನ ಗಮನಕ್ಕೆ ಬಂದಿತ್ತು. ದ್ಯಾಮಣ್ಣನ ಹೆಸರಿಗೆ ಸರ್ವೆ ನಂ. 237/2 ರಲ್ಲಿ ಮೂರು ಗುಂಟೆ ಕ್ರಯ ಎಂದು ಆರ್.ಟಿ.ಸಿ.ಯಲ್ಲಿ ನಮೂದಾಗಿರುವ ಬಗ್ಗೆ ನನ್ನ ವಕೀಲರಿಗೆ ತಿಳಿಸಿಲ್ಲ.

ದಾವಾ ಸ್ವತ್ತಿನ ಉತಾರನಲ್ಲಿ ನಮೂದು ಇರುವ ಎಲಿಗಾರ ಪಾರವ್ವ ನಿಜಗುನಿ, ಹಳಿಯಾಳ ನಾಗರತ್ನ ಕೋಂ ದೇವೆಂದ್ರ, ಹಳಿಯಾಳ ಚಂದನ್ ತಂದೆ ದೇವೆಂದ್ರ, ತಾಯಿ ನಾಗರತ್ನ ಎಂದು ನಮೂದು ಇದೆ ಎಂದರೆ ಸರಿ. ಅವರು ಯಾರು ನನಗೆ ಗೊತ್ತಿಲ್ಲ. ಅವರನ್ನು ಈ ದಾವೆಗೆ ಪಕ್ಷಗಾರರನ್ನಾಗಿ ಮಾಡಿಲ್ಲ. ನನ್ನ ಅಜ್ಜ ಬಸಪ್ಪ ಬಹಳ ಹಿಂದೆ ಆತನ ಜೀವಿತ ಕಾಲದಲ್ಲಿ ನಮ್ಮ ಗ್ರಾಮವನ್ನು ತೊರೆದು ನವಲಗುಂದಕ್ಕೆ ಹೋದ ಎಂದರೆ ಸರಿ. ನವಲಗುಂದದಲ್ಲಿ ನನ್ನ ತಂದೆ ತಿಪ್ಪಣ್ಣ ವಾಪಿದ್ದರು ಎಂದರೆ ಸರಿ. ದಾವಾ

ಸ್ವತ್ತನ್ನು ಹೊರತುಪಡಿಸಿ ಉಳಿದ ಒಟ್ಟು ಕುಟುಂಬದ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಸ್ವತ್ತನ್ನು ಹೊರತುಪಡಿಸಿ ಅಂಬಲಿಕೊಪ್ಪದಲ್ಲಿ ಸ್ವತ್ತಿನ ಸಂಖ್ಯೆ 32/1 ಎ/12 ಕ್ಷೇತ್ರ 1 ಎಕರೆ 35 ಗುಂಟೆ ಇದೆ ಎಂದರೆ ಸರಿಯಲ್ಲ. ಸದರಿ ಸ್ವತ್ತು ನಿಂಗಪ್ಪ ಬಸಣ್ಣರವರ ಹೆಸರಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ಮಾರಾಟ ಮಾಡಿ ನನ್ನ ತಂದೆಗೆ ಹಣ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಹಣದಿಂದ ನಾವು ನವಲಗುಂದ ಗ್ರಾಮದಲ್ಲಿ ಸ್ವತ್ತಿ ನ ಸಂಖ್ಯೆ 435/1 ಕ್ಷೇತ್ರ 3 ಎಕರೆ ಸ್ವತ್ತನ್ನು ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಈಗ ಬ್ಲಾಕ್ ನಂ. 435/1 ವಾದಿಗಳಾದ ನಮ್ಮ ಹೆಸರಿನಲ್ಲಿದೆ ಎಂದರೆ ಸರಿ. ನಮ್ಮ ತಂದೆ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ಎರಡನೇ ಪ್ರತಿವಾದಿ ನನ್ನ ಅಣ್ಣ ಆತನೂ ಸಹ ವ್ಯವಸಾಯ ಮಾಡುತ್ತಾನೆ. ಮೂರನೇ ಪ್ರತಿವಾದಿ ಕೆ.ಎಸ್.ಆರ್.ಟಿ.ಸಿ. ಬಸ್ ನ ಚಾಲಕ. ನನ್ನ ವಾದ ಪತ್ರದಲ್ಲಿ ನಾನು ವ್ಯವಸಾಯ ಮಾಡುತ್ತೇನೆ ಎಂದು ಬರೆದಿದ್ದೇನೆ ಎಂದರೆ ಸರಿ.

ಬ್ಲಾಕ್ ನಂ. 435/1 ಅನ್ನು ನನ್ನ ತಂದೆ 1996 ರಲ್ಲಿ ಖರೀದಿಸಿದ್ದರು ಎಂದರೆ ಸರಿ. ನನ್ನ ತಂದೆ ಆತನ ಸಹೋದರರಿಗೆ ಪಾಲು ಹೋಗಬಾರದು ಎಂದು ವಾದಿಗಳಾದ ನಮ್ಮ ಹೆಸರಿನಲ್ಲಿ ಸದರಿ ಸ್ವತ್ತನ್ನು ಖರೀದಿಸಿದ ಎಂದರೆ ಸರಿಯಲ್ಲ. 1996 ರ ಕ್ರಯಿ ಪತ್ರದಲ್ಲಿ ನನ್ನ ತಂದೆ ವಾದಿ 1 ರಿಂದ 4 ರವರನ್ನು ಅಪ್ರಾಪ್ತರು ಎಂದು ಬರೆಸಿರುತ್ತಾರೆ ಅದರ ಬಗ್ಗೆ ಏನು ಹೇಳುತ್ತೀರಿ ಎಂದರೆ ಸಾಕ್ಷಿ ನಾನು ಸರಿಯಾಗಿ ಉತ್ತರ ಕೊಡಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಒಟ್ಟು ಕುಟುಂಬದ ಸ್ವತ್ತಿನಿಂದ ಬಂದ ಹಣವನ್ನು ಸದರಿ ಸ್ವತನ್ನು ನಮ್ಮ ಹೆಸರಿನಲ್ಲಿ ಖರೀದಿಸಿದ್ದರು ಎಂದರೆ ಸರಿಯಲ್ಲ. ನಮ್ಮ ಮನೆತನದ ಸ್ವತ್ತುಗಳಿಗೆ ಯಾವುದೇ ವಿಭಾಗ ಆಗಿರುವುದಿಲ್ಲ. 1996 ರ ಕ್ರಯ ಪತ್ರದ ಸ್ವತ್ತನ್ನು ದಾವೆಗೆ ಸೇರಿಸಬೇಕು ಎಂದರೆ ಸಾಕ್ಷಿ ಅದಕ್ಕೂ ದಾವೆಗೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ನನ್ನ ಅಜ್ಜ ನವಲಗುಂದ ಗ್ರಾಮಕ್ಕೆ ಹೋದ ದಿನದಿಂಲೂ ನಾವು ದಾವಾ ಸ್ವತ್ತಿನಲ್ಲಿ ಸ್ವಾಧೀನ ಹಾಗೂ ವ್ಯವಸಾಯ ಮಾಡುತ್ತಿಲ್ಲ ಎಂದರೆ ಸಾಕ್ಷಿ ಪ್ರತಿವಾದಿಗಳೇ ಮಾಡುತ್ತಿದ್ದರು ನಮಗೆ ಬೆಳೆಯಲ್ಲಿಪಾಲು ಕೊಡುತ್ತಿದ್ದರು ಎಂದು ನುಡಿಯುತ್ತಾರೆ. ಸುಮಾರು 40-50 ವರ್ಷಗಳಿಂದಲೂ ಪ್ರತಿವಾದಿಗಳೇ ದಾವಾ

ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನಮಗೆ ಪಾಲು ಇಲ್ಲ ಎಂದು ಗೊತ್ತಿದ್ದರೂ ಹೇಳಿಕೆಯ ಮಾತು ಕೇಳಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಎಲ್ಲಾ ಸ್ವತ್ತನ್ನುದಾವೆಗೆ ಸೇರಿಸಿಲ್ಲ ಆಕಾರಣ ದಾವೆ ಪುರಸ್ಕರಿಸಲು ಯೋಗ್ಯವಲ್ಲ ಎಂದರೆ ಸರಿಯಲ್ಲ. ಉತಾರದಲ್ಲಿ ಕಂಡುಬರುವ ಎಲ್ಲರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಆದ್ದರಿಂದ ನಾನು ಯಾವುದೇ ಪರಿಹಾರಕ್ಕೆ ಯೋಗ್ಯನಲ್ಲ ಎಂದರೆ ಸರಿಯಿಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರಧಾನ ದಿವಾಣಿ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ. ಧಾರವಾಡ.**

**ಅ. ದಾ. ಸಂ. ಃ 310/2015**
**ಪಿ.ಡಬ್ಲ್ಯೂ ಃ 01**

**ಅ. ದಾ. ಸಂ. ಃ 310/2015**
**ಪಿ.ಡಬ್ಲ್ಯೂ ಃ 01**

**ಅ. ದಾ. ಸಂ. ಃ 437/219**
**ಪಿ.ಡಬ್ಲ್ಯೂ ಃ 01**

**ದಿನಾಂಕ ಃ 27-12-2021** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ- ಪ್ರತಿವಾದಿಯ ಪರ ಶ್ರೀ. ಎ.ಡಿ.ಜಿ.ಪಿ. ರವರಿಂದಃ-**

ನಾನು 5 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಒಂದರಿಂದ ಐದನೇ ತರಗತಿವರೆಗೆ ಉರ್ದು ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ಸಾಮಾನ್ಯವಾಗಿ ಶಾಲೆಗೆ ಮಕ್ಕಳನ್ನು ಸೇರಿಸುವ ಸಮಯದಲ್ಲಿ ತಂದೆ ತಾಯಿ ನೀಡಿದ ಮಾಹಿತಿಯ ಆಧಾರ ಮೇಲೆ ಶಾಲಾ ದಾಖಲಾತಿಗಳು ನಮೂದು ಆಗಿರುತ್ತವೆ ಎಂದರೆ ಸರಿ. ನಿಮ್ಮನ್ನು ಶಾಲೆಗೆ ಸೇರಿಸುವಾಗ ಶಾಲಾ ದಾಖಲಾತಿಯಲ್ಲಿ ನಿಮ್ಮ ಹೆಸರನ್ನು ಮಹಮ್ಮದ್ ಅಲಿ ಖಮರಅಲಿ ಸಿಗನಳ್ಳಿ ಎಂದು ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ದಾಖಲಿಸುವ ಸಮಯದಲ್ಲಿ ತಪ್ಪಾಗಿ ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರಧಾನ ದಿವಾಣಿ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ. ಧಾರವಾಡ.**